3	ಮೈಸೂರು ಲ್ಯಾಂಪ್ ವರ್ಕ್ಸ್ ನಿಯಮಿತ	57.31
4	ಮೈಸೂರು ಟೋಬ್ಯಾಕೋ ಕಂಪನಿ ನಿಯಮಿತ	0.33
5	ಮೈಸೂರು ಮ್ಯಾಚ್ ಕಂಪನಿ ನಿಯಮಿತ	0.00
6	ಮೈಸೂರು ಎಲೆಸ್ಟ್ರಿಕಲ್ ಇಂಡಸ್ಟ್ರೀಸ್	5.00
7	ಎನ್.ಜಿ.ಇ.ಎಫ್.ಲಿಮಿಟೆಡ್	157.48
8	ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಕಂಪನಿ ನಿಯಮಿತ	*
9	ಮೈಸೂರು ಮಿನೆರಲ್ಸ್ ಲಿಮಿಟೆಡ್	5.89
10	ಮೈಸೂರು ಕಾಸ್ಟೆಟಿಕ್ಸ್ ಲಿಮಿಟೆಡ್	0.46
11	ಕರ್ನಾಟಕ ರಾಜ್ಯ ವೆನೀರ್ಸ್ ನಿಯಮಿತ	0.62
12	ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತ	4.71
13	ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮ ನಿಯಮಿತ	7.37
14	ಕರ್ನಾಟಕ ರಾಜ್ಯ ಜವಳಿ ನಿಯಮಿತ	6.21
15	ಕರ್ನಾಟಕ ಟೆಲಿಕಾಂ ನಿಯಮಿತ	7.00
16	ಕರ್ನಾಟಕ ಪಲ್ಪ್‌ವುಡ್ ನಿಯಮಿತ	1.27
	ಒಟ್ಟು	**301.80**

* ಕಾರ್ಖಾನೆ ಸ್ಥಗಿತಗೊಂಡಿದ್ದು, ಲಿಕ್ವಿಡೇಟರ್‌ರವರನ್ನು ನೇಮಿಸಲಾಗಿದೆ.

278(617) ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ (ಬೆಳ್ಳಾವಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು ಬಡವನಹಳ್ಳಿಯಲ್ಲಿ ಹಾಲಿ ಇರುವ ಪೊಲೀಸ್ ಔಟ್ ಪೋಸ್ಟ್ ಠಾಣೆಯನ್ನು ಮೇಲ್ದರ್ಜೆಗೇರಿಸಬೇಕೆಂಬ ಬೇಡಿಕೆ ಇದೆಯೇ ?

ಆ) ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮವೇನು ?

ಇ) 2004–05ನೇ ಹಣಕಾಸು ಸಾಲಿನಲ್ಲಿ ಈ ಪೊಲೀಸ್ ಔಟ್ ಪೋಸ್ಟ್ ಠಾಣೆಯನ್ನು ಮೇಲ್ದರ್ಜೆಗೇರಿಸಲಾಗುವುದು ?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಡಿ.ಜಿ. ಮತ್ತು ಐ.ಜಿ.ಪಿ. ರವರು ವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದಾರೆ.

ಆ) ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ.

279(439) ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸವದತ್ತಿ ತಾಲ್ಲೂಕು ಮಲಪ್ರಭಾ ಎಡದಂಡೆ ಕಾಲುವೆ ಅಚ್ಚುಕಟ್ಟು ವ್ಯಾಪ್ತಿಯಲ್ಲಿರುವ 19–20 ವರ್ಷಗಳ ಹಳೆಯ ಏತ ನೀರಾವರಿ ಕಾಲುವೆಗಳನ್ನು ಪುನಶ್ಚೇತನಗೊಳಿಸಲಾಗುವುದೇ ;

ಆ) 1974ನೇ ಸಾಲಿನಲ್ಲಿ ನಿರ್ಮಾಣವಾದ ಮಲಪ್ರಭಾ ಜಲಾಶಯದಲ್ಲಿ ನೀರಾವರಿಗೆ ಮತ್ತು ಕುಡಿಯುವ ನೀರು ಸರಬರಾಜಿಗೆ ತೀರಾ ಕಡಿಮೆ ನೀರು ಶೇಖರಣೆಯಾಗುತ್ತಿರುವ ಪ್ರಯುಕ್ತ ಹೂಳನ್ನು ತೆಗೆಯುವ ಕಾರ್ಯಕ್ಕೆ ಸರ್ಕಾರ ಕ್ರಮ ಕೈಗೊಳ್ಳಲಾಗುವುದೆ ?

ಶ್ರೀ ಮಲ್ಲಿಕಾರ್ಜುನ ಖಿರ್ಗೆ (ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು):

ಅ) ಮಲಪ್ರಭಾ ಎಡದಂಡೆ ಕಾಲುವೆ ಅಚ್ಚುಕಟ್ಟಿನ ವ್ಯಾಪ್ತಿಯಲ್ಲಿ ಯರಗಟ್ಟಿ ಏತ ನೀರಾವರಿ ಯೋಜನೆಯು ಬರುತ್ತಿದ್ದು, ಸದರಿ ಯೋಜನೆಯ ಕಾಲುವೆಗಳ ತಳ ಮತ್ತು ಬದಿಗಳ ಲೈನಿಂಗ್‌ನ ಶಿಥಿಲತೆಯಿಂದ ಸೋರುವಿಕೆ ಕಂಡುಬಂದಿದ್ದು ಇದನ್ನು ಸರಿಪಡಿಸಲು ಹಂತಹಂತವಾಗಿ ಪುನಃಶ್ಚೇತನಗೊಳಿಸಲು ಯೋಜಿಸಲಾಗಿದೆ ಹಾಗೂ ಯರಗಟ್ಟಿ ಏತ ನೀರಾವರಿ ಯೋಜನೆಗಳ ಮೇಲ್ಮಟ್ಟದ ಹಾಗೂ ಕೆಳಮಟ್ಟದ ಕಾಲುವೆಗಳ ಆಯ್ದ ಭಾಗಗಳಲ್ಲಿ ತುರ್ತು ಕೆಲಸಗಳನ್ನು ಕೈಗೆತ್ತಿಕೊಳ್ಳಲು 2004–05ನೇ. ಸಾಲಿಗೆ ರೂ.28.00 ಲಕ್ಷಗಳ ಅನುದಾನವನ್ನು ನಿಗದಿಗೊಳಿಸಲಾಗಿದೆ.

ಆ) ಮಲಪ್ರಭಾ ಜಲಾಶಯದಲ್ಲಿನ ಉಪಯುಕ್ತ ನೀರಿನ ಕನಿಷ್ಠ ಮಟ್ಟ 2032 ಅಡಿಗಳು ಹಾಗೂ ಗರಿಷ್ಠ ಮಟ್ಟ 2079.50 ಅಡಿಗಳು. ಸಾಮಾನ್ಯವಾಗಿ ಜೂನ್ ತಿಂಗಳ ಮಧ್ಯದಿಂದ ಜಲಾಶಯಕ್ಕೆ ನೀರಿನ ಒಳಹರಿವು ಪ್ರಾರಂಭವಾಗಿ ಸೆಪ್ಟೆಂಬರ್ ತಿಂಗಳ ಕೊನೆಯವರೆಗೆ ಇರುತ್ತದೆ. ನೀರಿನ ಸಂಗ್ರಹದ ಪ್ರಮಾಣಕ್ಕನುಗುಣವಾಗಿ ನೀರಾವರಿಗೆ ನೀರನ್ನು ಹರಿಸಿ ಮಟ್ಟ 2040 ಅಡಿಗಳಿಗೆ ಕುಡಿಯುವ ನೀರಿನ ಸಲುವಾಗಿ ಕಾಯ್ದಿರಿಸಲಾಗುತ್ತಿದೆ. ಕುಡಿಯುವ ನೀರಿನ ಬೇಡಿಕೆ ಹೆಚ್ಚಿರುವ ಬೇಸಿಗೆಯಲ್ಲಿಯೂ ಸಹ ಉಪಯುಕ್ತ ನೀರಿನ ಮಟ್ಟವನ್ನು 2032 ಅಡಿಗಳಿಗಿಂತ ಕೆಳಗೆ ಇಳಿಯದಂತೆ ಕಾಯ್ದಿರಿಸಲಾಗುವುದು. ಜಲಾಶಯದಲ್ಲಿ ಹೂಳು ಸಾಮಾನ್ಯವಾಗಿ ನೀರಿನ ಕನಿಷ್ಠ ಮಟ್ಟ 2032 ಅಡಿ ಒಳಗೆ ಶೇಖರಣೆಗೊಳ್ಳುವುದಾಗಿದ್ದು ಹೂಳು ತೆಗೆಯಲು ಸಧ್ಯಕ್ಕೆ ಯೋಜಿಸಿರುವುದಿಲ್ಲ.

280(431) Sri Manohar Kallappa Kinekar will the Chief Minister be pleased to State:

1 Whether the Government of Karnataka has proclaimed self assessment Tax system all over Karnataka;

2 Whether the rules are different for Bangalore and other parts of Karnataka ;

3 Whether there was any opposition from the Public to this system;

4 Whether the Government has now introduced new system to recover the property Tax;

5 If so give the details and the basis on which the system is introduced ?

Sri, S.R. More (Hon'ble Minister for MA & KUIDFC) :

1 Yes

2 Yes, upto 2003-04 From 2004-05 rules are common for all the city Corporations.